ಹೆಡ್‌ಮಾಸ್ತರು ಹಿರೇಗುತ್ತಿಗೆ ಬಂದಿಳಿದಾಗ ರಾತ್ರಿ ಎಂಟು ಗಂಟೆ. ಹಿರೇಗುತ್ತಿಯ ಚೈತನ್ಯವು ಹೆಡ್‌ಮಾಸ್ತರರನ್ನು 'ಬಾ', 'ಬಾ' ಎಂದು ಕರೆಯತೊಡಗಿ ಅನೇಕ ವರ್ಷಗಳೇ ಆಗಿಬಿಟ್ಟಿದ್ದವು. ಶಂಕರ ಕಾಮತರು ಪಳಿಬಾಗಿಲು ಜೋಡಿಸಿ ಅಂಗಡಿ ಮುಚ್ಚುತ್ತಿರುವ ಹೊತ್ತು. ಮಾಸ್ತರು ಬಂದಿದ್ದು ಕಾಮತರ ಲಕ್ಷ್ಯಕ್ಕೆ ಬರಲಿಲ್ಲ. ಏನೋ ಯೋಚಿಸುತ್ತ ಮಾಸ್ತರು ತಾವಿದ್ದ ಹಳೆಮನೆಗೆ ಹೋಗುವ ರಸ್ತೆ ಕಡೆ ತಿರುಗಿದರು. ಆಗಲೇ ಊರಿಗೆ ನಿದ್ದೆಯ ಸಮಯ. ರಸ್ತೆಯಲ್ಲಿ ಯಾರೂ ಇಲ್ಲ. ಚಂದ್ರನ ಬೆಳಕು ಹಳೆಯ ನೆನಪುಗಳ ಮೇಲೆ ಹರಡಿಕೊಂಡಿತ್ತು. ದಟ್ಟ ಮೌನದ ಆ ಸುಮಧುರ ಆವರಣವನ್ನು ಹೊಗುತ್ತಾ ಮಾಸ್ತರು ಸಣ್ಣದಾಗಿ ಕಂಪಿಸುತ್ತ ಭಾವಾವೇಶಕ್ಕೆ ಒಳಗಾದರು.



ಚಿಂತಾಮಣಿ ಕೊಡ್ಲೆಕೆರೆ

ತಾವು ಸುಮಾರು ಇಪ್ಪತ್ತು ವರ್ಷ ವಾಸವಾಗಿದ್ದ ಆ ಮನೆಯನ್ನು ಈಗ 'ಹೊರಗೆ ನಿಂತು' ನೋಡುತ್ತಿದ್ದರು. ಅಲ್ಲಿ ಈಗ ವಾಸವಾಗಿರುವವರಿಗೆ ಇವರ ಕುರಿತು ತಿಳಿಯದು. ಅಷ್ಟರ ಮೇಲೆ, ಮನೆಯವರಾದರೂ ಹೊರಗೆ ಬಂದು 'ಯಾರೂ...' ಎಂದು ಕೇಳಲಿಲ್ಲ. ಕಿಟಕಿಯಿಂದಲೇ ಇಣುಕಿ, 'ಯಾರಪ್ಪಾ ಇಷ್ಟು ಹೊತ್ತಿನಲ್ಲಿ!' ಎಂದು ನೋಡಲಿಲ್ಲ. ಮನೆಯ ಮುಂದಿನ ಪೇರಲಗಿಡ, ಎರಡೂ ಪಕ್ಕದ ಹೂ ಗಿಡಗಳು, ಬಲತುದಿಯ ನುಗ್ಗೆಮರ, ಎಡಮಧ್ಯದ ಅಶ್ವತ್ಥಮರ, ಸುತ್ತಲಿನ ತೆಂಗಿನಮರಗಳು ಎಲ್ಲವನ್ನೂ ಎಷ್ಟೋ ವರ್ಷಗಳ ಬಳಿಕ ಮತ್ತೊಮ್ಮೆ ಕಣ್ತುಂಬಿಕೊಂಡರು. ಪಾಗಾರಕ್ಕೆ ಆನಿಸಿಟ್ಟ ತನ್ನ ಸೈಕಲ್ ನೋಡಿ ಚಕಿತಗೊಂಡರು. ಊರಿಂದ ಹೊರಡುವಾಗ ಕೇರಿಯ ಕಮಲಾನಾಥನಿಗೆ ಅವರು ಆ ಸೈಕಲ್ ಕೊಟ್ಟಿದ್ದರು.

ಮಾಸ್ತರರ ನೆಚ್ಚಿನ ಶಿಷ್ಯ ಕಮಲಾನಾಥ. ಇಂಗ್ಲಿಷ್ ಅವನ ತಲೆಗೆ ಹತ್ತಲಿಲ್ಲ. ಬೀಜಗಣಿತ ಅವನಿಗೊಂದು ಸೋಜಿಗ.ಆ ಸೂತ್ರಗಳು ವಿಸ್ತರಿಸುತ್ತಾ ಬಲಗಡೆ ಒಂದು ದೊಡ್ಡ ವಾಕ್ಯದಂತೆ ಕಾಣುವುದರ ಮರ್ಮವನ್ನು ಅವನು ಊಹಿಸಲಾರದವನಾಗಿದ್ದ. ಹೆಡ್‌ಮಾಸ್ತರರ ವಿಶೇಷ ಕಾಳಜಿಯ ಪಾಠಗಳಿಂದಾಗಿ ಹೇಗೋ ಎಸ್.ಎಸ್.ಎಲ್.ಸಿ. ಪಾಸಾಗಿದ್ದ. ಮಾಸ್ತರರ ಮನೆಯ ಸಣ್ಣ ಪುಟ್ಟ ಕೆಲಸಗಳಿಗೆ ಒದಗಿ ಬರಲು ಅವನು ಸದಾ ಸಿದ್ಧ. ಕೇರಿಯಲ್ಲಿ ಕೂಗಳತೆಯಲ್ಲಿ ಅವನ ಮನೆ. ಹಿರೇಗುತ್ತಿಗೆ ವಿದಾಯ ಹೇಳುವಾಗ ಹೆಡ್‌ಮಾಸ್ತರು, "ತನ್ನ